ಶ್ರೀ ಎನ್. ಹುಚ್ಚಮಾಸ್ತಿ ಗೌಡ (ಕೃಷಿ ಸಚಿವರು):–

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಂಗಳೂರಿನಲ್ಲಿ ಒಂದು ಮಣ್ಣು ಆರೋಗ್ಯ ಕೇಂದ್ರವು ಕಾರ್ಯ ನಿರ್ವಹಿಸುತ್ತಿದೆ.

ಆ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೃಷಿ ವಿಸ್ತರಣಾ ಯೋಜನೆಯಲ್ಲಿ ಮೂಲತಃ ಒಟ್ಟು 270 ಕೃಷಿ ಸಹಾಯಕರ ಹುದ್ದೆಗಳು ಮಂಜೂರಾಗಿದ್ದು, ಅವುಗಳಲ್ಲಿ 150 ಕೃಷಿ ಸಹಾಯಕರುಗಳು ಸೇವೆ ಸಲ್ಲಿಸುತ್ತಿದ್ದಾರೆ ಮತ್ತು 120 ಹುದ್ದೆಗಳು ಖಾಲಿ ಇವೆ.

ಇ) ಕೃಷಿ ಸಹಾಯಕರ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರದ ಆದೇಶ ಸಂಖ್ಯೆ ಕೈತೋಇ 137 ಎಯುಎಂ 92, ದಿನಾಂಕ 4–8–92ರಲ್ಲಿ ನೇಮಕಾತಿ ಮಾಡಲು ಆರ್ಥಿಕ ಮಿತವ್ಯಯದ ದಿಗ್ಬಂಧನೆಯನ್ನು ಸಡಿಲಗೊಳಿಸಲಾಗಿದೆ. ಹೊಸ ನೇಮಕಾತಿ ಮಾಡಲು ಕ್ರಮ ಕೈಗೊಳ್ಳಲಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೂಲಗೇಣಿ ಹಕ್ಕಿನ ಆಸ್ತಿಯ ಪರಭಾರೆಯ ಕುರಿತು

228 (907) ಶ್ರೀ ಪಿ. ಬಸವರಾಜ್ (ಬ್ರಹ್ಮಾವರ):– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಿಸಿದಂತೆ, ಮೂಲಗೇಣಿ ಹಕ್ಕಿನಿಂದ ಬಂದ ಆಸ್ತಿಯನ್ನು ಮಾಲೀಕನು ಪರಭಾರೆ ಮಾಡುವ ಕುರಿತು ಕಾಯ್ದೆಯಲ್ಲಿ ಅವಕಾಶ ಇರುವುದೇ ?

ಆ) ಇದ್ದಲ್ಲಿ, ಈ ರೀತಿಯ ಮೂಲಗೇಣಿ ಪರಭಾರೆ ನಿಷೇಧ ಕಾಯಿದೆಗೆ ತಿದ್ದುಪಡಿ ಎಂದಿನಿಂದ ಜಾರಿಗೆ ಬಂದಿದೆ ? (ವಿವರಗಳನ್ನು ನೀಡುವುದು)

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು):–

ಅ) ದಕ್ಷಿಣ ಕನ್ನಡ ಜಿಲ್ಲೆಯು 1956ರ ಮೊದಲು ಮದ್ರಾಸ್ ಪ್ರಾಂತ್ಯಕ್ಕೆ ಒಳಪಟ್ಟಿತ್ತು. ಆ ಪ್ರಾಂತ್ಯದಲ್ಲಿ ಜಾರಿಯಲ್ಲಿದ್ದ ಕಾಯಿದೆ ಪ್ರಕಾರ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೂಲಗೇಣಿ ಹಕ್ಕಿನಿಂದ ಬಂದ ಆಸ್ತಿಯನ್ನು ಮಾಲೀಕನು ಪರಭಾರೆ ಮಾಡಲು ಅವಕಾಶ ಕಲ್ಪಿಸಿಕೊಡಲಾಗಿತ್ತು.

ಆ) ಮೂಲಗೇಣಿ ಪರಭಾರೆ ನಿಷೇಧ ಕಾಯಿದೆ ತಿದ್ದುಪಡಿ ದಿನಾಂಕ 1–3–74ರಿಂದ ಜಾರಿಗೆ ಬಂದಿರುತ್ತೆ. ಕರ್ನಾಟಕ ಭೂ ಸುಧಾರಣೆ ಕಾಯಿದೆ 1961ಕ್ಕೆ ಸಮಗ್ರ ತಿದ್ದುಪಡಿಗಳು ತಂದು ದಿನಾಂಕ 1–3–74 ರಿಂದ ಎಲ್ಲಾ ತರಹದ ಗೇಣಿಗಳನ್ನು ರದ್ದುಪಡಿಸಲಾಗಿದೆ. ಹಾಗೂ ಎಲ್ಲಾ ಗೇಣಿ ಜಮೀನುಗಳು ಮೂಲಗೇಣಿ ಜಮೀನು ಸೇರಿದಂತೆ ಸರ್ಕಾರದ ವಶಕ್ಕೆ ಬಂದಿರುತ್ತೆ.

ರಾಜ್ಯದಲ್ಲಿನ ಸಬ್–ರಿಜಿಸ್ಟ್ರಾರ್ ಹುದ್ದೆಗಳ ಉನ್ನತೀಕರಣ ಕುರಿತು

229 (909) ಶ್ರೀ ಪಿ. ಬಸವರಾಜ್ (ಬ್ರಹ್ಮಾವರ):– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿರುವ ಒಟ್ಟು ಸಬ್–ರಿಜಿಸ್ಟ್ರಾರ್ ಹುದ್ದೆಗಳು ಎಷ್ಟು ಹಾಗೂ ಈ ಹುದ್ದೆಗಳು ಯಾವ ವರ್ಗಕ್ಕೆ ಸೇರಿದೆ ?

ಆ) ಇತ್ತೀಚೆಗೆ ಆ ಹುದ್ದೆಗಳ ಉನ್ನತೀಕರಣ ಮಾಡಲಾಗಿದೆಯೇ ?

ಇ) ಮಾಡಲಾಗಿದ್ದಲ್ಲಿ, ಯಾವ ವರ್ಗದಿಂದ ಯಾವ ವರ್ಗಕ್ಕೆ ಉನ್ನತೀಕರಿಸಲಾ[illegible] ?

ಈ) ಈ ಉನ್ನತೀಕರಣ ಪ್ರಕ್ರಿಯೆಯಿಂದ ರಾಜ್ಯದ ಬೊಕ್ಕಸಕ್ಕೆ ತಗಲಿದ ಒಟ್ಟು ಹೆಚ್ಚುವರಿ ವೆಚ್ಚ ಎಷ್ಟು ?

ಉ) ಈ ಹುದ್ದೆಗಳ ಉನ್ನತೀಕರಣ ಪ್ರಕ್ರಿಯೆ ಮಾಡಲು ಕಾರಣಗಳೇನು ?

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು) -

ಅ) 1) 1ನೇ ದರ್ಜೆ ಉಪನೋಂದಣಾಧಿಕಾರಿ ಹುದ್ದೆಗಳು : 84
2) 2ನೇ ದರ್ಜೆ ಉಪನೋಂದಣಾಧಿಕಾರಿ ಹುದ್ದೆಗಳು : 144

ಒಟ್ಟು 228

'ಸಿ' ವರ್ಗಕ್ಕೆ ಸೇರಿವೆ.

ಆ) ಹುದ್ದೆಗಳನ್ನು ನೇಮಕಾತಿ ನಿಯಮಗಳ ಅನುಸಾರ ಮುಂಬಡ್ತಿಯ ಮೂಲಕ ತುಂಬಿದ ದಿನಾಂಕದಿಂದ ಅಸ್ತಿತ್ವಕ್ಕೆ ಬರುವ ಷರತ್ತಿಗೊಳಪಡಿಸಿ, 84ಪ್ರಥಮ ದರ್ಜೆ ಉಪನೋಂದಣಾಧಿಕಾರಿಗಳ ಹುದ್ದೆಗಳನ್ನು ಮಾತ್ರ ಉನ್ನತೀಕರಿಸಲಾಗಿದೆ.

ಇ) ಮೇಲಿನ ಷರತ್ತಿಗೊಳಪಡಿಸಿ, ಸಮೂಹ 'ಸಿ' ಹುದ್ದೆಗಳನ್ನು ಸಮೂಹ 'ಬಿ' ಹುದ್ದೆಗೆ ಉನ್ನತೀಕರಿಸಲಾಗುವುದು.

ಈ) ಅವರು ಮುಂಬಡ್ತಿ ಪಡೆದಾಗ ಕೇವಲ ಒಂದು ವೇತನ ಮುಂಬಡ್ತಿಗೆ ಮಾತ್ರ ಅರ್ಹರು. ಕಾರಣ ರೂ. 91.000–00 ವೆಚ್ಚವೆಂದು ಅಂದಾಜು ಮಾಡಿದೆ.

ಉ) 1. ಕೆಲಸದ ಸ್ವಭಾವ
2. ಅಂತಸ್ತು
3. ಜವಾಬ್ದಾರಿ
4. ನೆರೆರಾಜ್ಯಗಳ ತತ್ಸಮ ಹುದ್ದೆಗಳ ಸ್ಥಾನಮಾನ
5. ಪ್ರಸ್ತುತ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿನ ಅಂತರ ಇತ್ಯಾದಿ.

ಉಪಾಧ್ಯಕ್ಷರು:– ಮಂಡಿಸಲಾಯಿತು.

ಶ್ರೀ ಜಿ. ಪುಟ್ಟಸ್ವಾಮಿ ಗೌಡ:– ಪ್ರಶ್ನೋತ್ತರಕ್ಕೆ ಇರತಕ್ಕಂಥಾದ್ದು ಒಂದು ಗಂಟೆ ಎಂದು ನಾವು ತಿಳಿದುಕೊಂಡಿದ್ದೇವೆ. ತಾವು ಎರಡೂಕಾಲು ಗಂಟೆ ಮಾಡುವುದಾದರೆ, ಬಹುಶಃ ಇದು ಯಾವಾಗ ಬದಲಾವಣೆಯಾಯಿತು ಎನ್ನುವುದನ್ನು ತಿಳಿಸಬೇಕು.

ಉಪಾಧ್ಯಕ್ಷರು:– ನಾನು ತಮಗೆ ಆಮೇಲೆ ತಿಳಿಸುತ್ತೇನೆ.

<u>ವರದಿಯನ್ನೊಪ್ಪಿಸುವುದು.</u>

ಶ್ರೀಮತಿ ಮೋಟಮ್ಮ (ಅಧ್ಯಕ್ಷರು, ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿ):– ಮಾನ್ಯ ಉಪಾಧ್ಯಕ್ಷರೇ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಮಿತಿಯ 3ನೇ ವರದಿಯಾಗಿ, ರಾಯಚೂರು ಜಿಲ್ಲೆಯ ಯಡಕಲೂರು ಮತ್ತು ಗುಲ್ಬರ್ಗಾ ಜಿಲ್ಲೆಯ ಅಳಗಿ (ಬಿ) ಗ್ರಾಮದಲ್ಲಿ ಪರಿಶಿಷ್ಟ ಜನಾಂಗಗಳ ಮೇಲೆ ನಡೆಯಿತೆನ್ನಲಾದ ದೌರ್ಜನ್ಯಗಳ ಬಗ್ಗೆ ವರದಿಯನ್ನು ಒಪ್ಪಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ.

ಉಪಾಧ್ಯಕ್ಷರು:– ವರದಿಯನ್ನು ಮಂಡಿಸಲಾಯಿತು.